ಸ್ಯ 1884ನೇ ಇಸವಿ ಅರ್ಜೀ ನಂಬರ್ 71.

ಮೃತಪಟ್ಟ ರಾಗಿ ಬಿದ್ದಂಣನ ಮಗ ಬೈರಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕೋಟೆ ತಿಂಮಣ್ಣನ ಹೆಂಡತಿ ಗೋಪೆಮ್ಮನು, ಮೃತಪಟ್ಟ ಸದರೀ ಬೈರಪ್ಪನವರಿಗೆ ಅಕ್ಕ ಆಗಬೇಕೆಂಬ ಹಕ್ಕುದಾರೀ ಮೇಲೆ ಸೀರಳ್ಳಿ ಚಿಕ್ಕಮೇಟಿ ಸ್ಥಳದ ಗೋಪೆಮ್ಮನವರು, ಡಿಪೋ ವಾಸಸ್ಥರಾಗಿ ಮೃತಪಟ್ಟ ಬೈರಪ್ಪನವರ ಚಿಂದಗಿ ಬಗ್ಯಾಗಿ ಬರತಕ್ಕ ಸ್ಟ್ಯಾವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟಿ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ

ಸದರೀ ವರಿಷ್ಠಾಸ್ತು ದಾರರಾದ ಗೋಪೆಮ್ಮನವರ ಅರ್ಜೀಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರ ಸ್ಟಿಫಿಕೇಟಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೈರಪ್ಪನವರ ಆಸ್ತಿಗೆ ಹಕ್ಕುದಾರ ವಿಸ್ಟರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಜೂನ್ ತಿಂಗಳು 30ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1884ನೇ ಇಸವಿ ಮಿಸಲೇನಿಯಸ್ ನಂಬರ್ 69.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಅರಳೇಪೇಟೆಲಿರುವ ಟರ್ನ ಮುಖ್ಯ ಪೋರ್ಜು ಶಾನುಭೋಗ ರಾಮು ಕೃಷ್ಣನ್ನ ಅಂಣ ವೆಂಕಣ್ಣನಿಗೆ ಬುದ್ಧಿ ಸ್ವಾಧೀನದಲ್ಲಿಲ್ಲವಾದ್ದರಿಂದ ಈತನ ಜಿಂದಗಿ ಬಗ್ಯೆ ಡಿಪೋ ರಾಮಯ್ಯನು ಮ್ಯಾನೇಜಮೆಂಟ್ ಅಗ ಸರ್ಟಿಫಿಕೇಟಿ ಕೊಡಿಸಬೇಕೆಂದು ಕೊಟ್ಟಿರುವ ಅರ್ಜೀಯನ್ನು ಈ ಜುಲೈ ತಿಂಗಳು 10ನೇ ತಾರೀಖಿನಲ್ಲಿ ವಿಚಾರಣೆ ಮಾ ಡಲಾಗಿ ಪ್ರತಿವಾದಿ ತಕರಾರುದಾರ್ರು ಆ ತಾರೀಖು ದಿವಿ 10 ಘಂಟಿಗೆ ಸರಿಯಾಗಿ ಈ ಕೋರ್ಟು ಮುಂದೆ ಹಾಜರಾಗಬೇಕಾಗಿ ಈ ನೋಟೀಸ್ ಜಾರಿಗೊಳಿಸಿಯಿದೆ.

ಸಿ. ಕ್ರಿಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 30ನೇ ಜೂನ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತುರ್ವೆಕೆರೆ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ದೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ಸ್ಟೇಜನ್ನ ಪಾಜರು ಮಾಡಿದವರೆ ಆಗಲಿ ಅಥವಾ ವಾಪಸು ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಪ್ರತಿನಿಧಿರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಎಂಟು ತಿಂಗಳ ವಳಗಾಗಿ ಡಿಪೋ ಸಬ್ ರಿಜಿಸ್ಟ್ರಾರವರ ರೂಬರೂ ಪಾ ಸ್ಟಿಆವನ್ನು ವಾಪಸ್ ತೆಗದುಕೊಳ್ಳಬೇಕು, ಇದಕ್ಕೆ ತಪ್ಪಿದರೆ ಸ್ಯ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸ್ಯ ಅನುಸರಿಸಿ ಅದು ನಾಶಪಡಿಸಲ್ಪಡುವದು.

ಡಾಕ್ಯುಮೆಂಟ್ ನಂಬರ್.	ದಸ್ತಾವೇಜು ಪೇಶ ಆದದ್ದು.	ರಿಜಿಸ್ಟರಿ ಬಗ್ಗೆ ಪೇಶ ಆದದ್ದು.	ರಿಜಿಸ್ಟರಿ ಆದದ್ದು.	ದಸ್ತಾವೇಜು ಒಪ್ಪಿಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
31 ಇ—83	16—4—82	19—6—82	26—6—82	ವಡ್ಡರ ಮಲ್ಲೇನಹಳ್ಳಿ ಗ್ರಾಮದ ಬೋರಂಣನ ಮಗ ಸುಬ್ಬ	ವಡ್ಡರಹಳ್ಳಿ ಗ್ರಾಮದ ಬಸವಲಿಂಗಯ್ಯ	50 ರೂಪಾಯಿಗೆ ವಡ್ಡರಹಳ್ಳಿಯಲ್ಲಿ ತನ್ನ ಹೆಸರಿಗೆ ಇರತಕ್ಕ ಕೆಲವು ಜಮೀನುಗಳು ಖರೀದಿಗೆ ಕೊಟ್ಟಿರುವದಾ, ಮೈರೆ.

ತಾರೀಖು 17ನೇ ಜೂನ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾದ ಅಧಿಕಾರ ಹೊಂದಿದ ಮುತ್ತಾಲೀಕ ಯಾ ಪಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳ ವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳದೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಯನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ದಸ್ತಾವೇಜು ನಂಬರ್	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟರ್ ಮಾಡಿದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ಸಾಸ್ಥಳ	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು
60 1882—83	1—6—82	5—6—82	5—6—82	ಲಿಂಗದಹಳ್ಳಿ ಮೇಲಣಾರು ನೆ ಲಿಂಗಂಣ.	ಹೊನ್ನವಳ್ಳಿ ತಾಲ್ಲೂಕು ಗುರುಗದಹಳ್ಳಿ ವಾಲ್ಲಪಟ್ಟ.	45 ರೂಪಾಯಿಗೆ ಲಿಂಗದಹಳ್ಳಿಗಾ ಮದಲ್ಲಿ ಇರುವ ಸರ್ವೆ 49ನೇ ನಂಬರ್ ಬಾಗಾಯತು ಜಮೀನು ಪೈಕೀ ತನ್ನ ಹಿಸ್ಸೆ ಬಾಬತು ಜಮೀನು ಕ್ರಯಕ್ಕೆ ಕೊಟ್ಟರುವದಾಗಿ ವಗೈರೆ.

ಪಿ. ಎಸ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಅರಮನೆ ಇಲಾಖಾ ಅಸಿಸ್ಟೆಂಟ್ ಕಮಿಷನರವರ ಆಫಿಸಿನಿಂದ.

ತಾರೀಖು 25ನೇ ಜೂನ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಲವು ಪ್ರೈವೇಟ್ ಜನಗಳ ಸಾಲಗಳನ್ನು ನಿವರ್ತಿ ಮಾಡುವದಕ್ಕೋಸ್ಕರ ಈ ಕೆಳಗೆ ನಮೂದು ಮಾಡುವ ಜವಾಹಿರು ವಗೈರೆ ವಜವೆಗಳನ್ನು ಸ್ಯ ಮಜಕೂರು ಜುಲೈ ತಾರೀಖು 15ನೇ ಮಂಗಳವಾರ ದಿವಿ 12 ಘಂಟೆ ಲಾಗಾಯಿತು ಅದರ ಮುಂದಣ ದಿನಗಳಲ್ಲೂ ಸಹಾ ಮೈಸೂರು ಅರಮನೆ ಖಜಾನೆ ಬಳಿ ಹರಾಜ್ ಮಾಡಿಸುವದರಿಂದ ಇಚ್ಛೈಯುಳ್ಳ ಜನಗಳು ಬಂದು ಚಡ ದರಖಾಸ್ತಿನಲ್ಲಿ ತಕ್ಷಣ ಪದು ಗವಜನ್ನ ಹಾಜರ್ಮಾಡತಕ್ಕದ್ದೆಂತ ನಿಬಂಧನೆ ಮಾಡಿರುತ್ತೆ.

ಜಾ॥ ನಂ.	ಪಟ್ಟ ನಂ.	ನಗದ ಹೆಸರು.	ಪಟ್ಟೇಮೇರೆ ಅಂದಾಜ್ ರೂಪಾಯಿ.
1	4	ಕೆಂಪಿನ ಅಡ್ಡಬಿಲ್ಲೆ 1ಕ್ಕೆ	300
2	6	ಡಿಟೋ ಚೌಕಟ್ಟು 1ಕ್ಕೆ	300
3	11	ಮಲಕಿನ ಅಡ್ಡಿಕೆ	300
4	32	ಮುಖರಾ 1ಕ್ಕೆ	800
5	203	ಪಜ್ಜದ ಜಡೆಕುಚ್ಚು 3ಕ್ಕೆ	250
6	209	ಯೇಕಾವಳಿ ಸರ 1ಕ್ಕೆ	275
7	221	ಚಿನ್ನದ ಡಾಬು 1ಕ್ಕೆ	1,080
8	234	ಚಿನ್ನದ ವೀಳ್ಯ ಡಬ್ಬಿ	500
9	235	ಚಿನ್ನದ ವೀಳ್ಯ ಸಂಚಿಕೆ	1,850
10	237	ಚಿನ್ನದ ಕುಜಾಯಿ 1ಕ್ಕೆ	2,130
11	239	ಚಿನ್ನದ ಚಂಬಾ 1ಕ್ಕೆ	115
12	242	ಹವಳದ ಚಂಡು 1ಕ್ಕೆ	10